| | |
|---|---|
| ಕರ್ನಾಟಕ ಸರ್ಕಾರ | (ಸಿ.ಆರ್.ಪಿ. 67) |

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,
ಸಿ.ಸಿ. ನಂ.ಃ307/2023

.....................................................................

CW 10
PW 02

| | | |
|---|---|---|
| ಹೆಸರು | ಃ | ಮಂಜುನಾಥ ಮುರ್ಕಾಡಿ |
| ತಂದೆಯ ಹೆಸರು | ಃ | ಯಲ್ಲಪ್ಪ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಗೌಂಡಿ ಕೆಲಸ |
| ವಾಸಸ್ಥಳ | ಃ | ಬೆಳವಟಗಿ, ತಾಃ ಹಳಿಯಾಳ. |

ದಿನಾಂಕ 15-09-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1, ಚಾಸಾ 4, ಚಾಸಾ 5, ಚಾಸಾ 9 ಮತ್ತು ಚಾಸಾ 13 ರವರು ಪರಿಚಯ ಇದ್ದಾರೆ. ಚಾಸಾ 2, ಚಾಸಾ 3, ಚಾಸಾ 6 ರಿಂದ 8 ರವರು ಪರಿಚಯ ಇಲ್ಲ.

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ, ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತಾವು, ಚಾಸಾ 4 ಮತ್ತು ಚಾಸಾ 5 ರವರು ಇರುವುದಾಗಿ ಒಪ್ಪಿಕೊಂಡಿದ್ದು, ನಾವು ಸದರಿ ಭಾವಚಿತ್ರವನ್ನು 2 ವರ್ಷಗಳ ಹಿಂದೆ ಮುರ್ಕವಾಡಕ್ಕೆ ಹೋಗುತ್ತಿರುವಾಗ ಪೊಲೀಸರು ನಮಗೆ ನಿಲ್ಲಿಸಿ ಭಾವಚಿತ್ರವನ್ನು ತೆಗೆದರು ಮತ್ತು ಆ ಸಮಯದಲ್ಲಿ ನಮ್ಮಿಂದ ಒಂದು ದಾಖಲೆಗೆ ಸಹಿ ಪಡೆದರು. ಸದರಿ ದಾಖಲೆ ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಘಟನಾ ಜಾಗದ ಪಂಚನಾಮೆಯನ್ನು **ನಿಪಿ 2 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 2ಎ** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ವಾಹನ ತಡೆ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ವಾಹನ ತಡೆ ಪಂಚನಾಮೆಯನ್ನು ಈಗಾಗಲೇ **ನಿಪಿ 3 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ3 ಎ ಎಂದು** ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಠಾಣೆಯಲ್ಲಿ ಮಾಡಲಾಗಿದೆ ಪೊಲೀಸರು ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಪೊಲೀಸರು ಎರಡು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರಗಳನು ಸಾಕ್ಷಿ ನೋಡಿ ಗುರುತಿಸಿರುವುರಿಂದ ಅವುಗಳನ್ನು **ನಿಪಿ 4 ಮತ್ತು 5 ಎಂದು** ಗುರುತಿಸಲಾಯಿತು. ಆರೋಪಿತರು ನನಗೆ ಪರಿಚಯವಿಲ್ಲ ಹಾಗೂ ಈ ಹಿಂದೆ ಅವರನ್ನು ನಾನು ನೋಡಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆಯೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 10-11-2022 ರಂದು ನೀವು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ದಿನಾಂಕ 09-11-2022 ರಂದು ನಾನು ನಮ್ಮ ಊರಿನಿಂದ ------------------ ಚಾಲಕನ ಹೆಸರು ವಿಳಾಸ ನನಗೆ ಗೊತ್ತಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಪಿ 6 ಎಂದು** ಗುರುತಿಸಲಾಯಿತು. ದಿನಾಂಕ 02-12-2022 ರಂದು ಪೊಲೀಸರಿಗೆ ಮರುಹೇಳಿಕೆ ನೀಡಿ ಅದರಲ್ಲಿ ನೀವು ನಾನು ಹೇಳಿಕೆ ನೀಡುವಾಗ -------------- ಮೂಲ ಪಿರ್ಯಾದಿನಲ್ಲಿ ಸೇರ್ಪಡೆ ಮಾಡಿಕೊಳ್ಳಲು ವಿನಂತಿ ಇದೆ ಅಂತಾ ನಾನು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು **ನಿಪಿ 7 ಎಂದು** ಗುರುತಿಸಲಾಯಿತು.

ದಿನಾಂಕ 10-11-2022 ರಂದು ಪೊಲೀಸರು ಚಾಸಾ 4 ಮತ್ತು 5 ರವರ ಸಮಕ್ಷಮ ನೀವು ತೋರಿಸಿದಂತೆ ಮುರ್ಕವಾಡ ಬೆಳವಟಗಿ ನಾಗು ಸೋಮನಿಂಗ ಬಡಂಗಿ ರವರ ಜಮೀನಿನ ಸಮೀಪ ರಸ್ತೆಯ ಮೇಲೆ ಎರಡೂ ವಾಹನಗಳು ವೇಗವಾಗಿ ಬಂದು ಒಂದಕ್ಕೊಂದು ಮುಖಾಮುಖಿ ಡಿಕ್ಕಿ ಹೊಡೆದು ಅಪಘಾತಪಡಿಸಿದ ಜಾಗದ ಪಂಚನಾಮೆಯನ್ನು ಬೆಳಗ್ಗೆ 10-30 ರಿಂದ 11-30 ರ ವರೆಗೆ ಜರುಗಿಸಿರುತ್ತಾರೆ ಮತ್ತು ಆ ಸಮಯದಲ್ಲಿ ಒಂದು ಕಚ್ಚಾ ನಕಾಶೆಯನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 10-11-2022 ರಂದು ಹಳಿಯಾಳ ಪೊಲೀಸ ಠಾಣೆಯ ಆವರಣದಲ್ಲಿ ಪೊಲೀಸರು ಚಾಸಾ 4 ಮತ್ತು 5 ಮತ್ತು ನಿಮ್ಮ ಸಮಕ್ಷಮ ಅಪಘಾತಕ್ಕೊಳಪಟ್ಟ ಮೋಟಾರ ಸೈಕಲ್ ನಂಬರ ಕೆಎ-65-ಇ-6910 ಮತ್ತು ಟ್ರ್ಯಾಕ್ಟರ್ ಟೇಲರ್ ನಂಬರ ಕೆಎ-65-ಟಿ-1081 ನೇದ್ದರ ವಾಹನ ತಡೆ ಪಂಚನಾಮೆಯನ್ನು ಮಧ್ಯಾಹ್ನ 12-00 ರಿಂದ 01-0 ಗಂಟೆಯ ವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವನ್ನು ನೀವು ಕಣ್ಣಾರೆ ನೋಡಿದ್ದರೂ ಸಹ ಮತ್ತು ನಿಮ್ಮ ಸಮಕ್ಷಮ ಪೊಲೀಸರು ಘಟನಾ ಜಾಗದ ಪಂಚನಾಮೆ ಮತ್ತು ವಾಹನ ತಡೆ ಪಂಚನಾಮೆ ಮಾಡಿದ್ದರು ಸಹ ಈ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.